ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 09-01-1995.

# *ನಿಶ್ಚಯ ಬುದ್ಧಿಯ ಚಿಹ್ನೆ - ನಿಶ್ಚಿತ ವಿಜಯೀ ಹಾಗೂ ಸದಾ ನಿಶ್ಚಿಂತ ಸ್ಥಿತಿಯ ಅನುಭವ.*

(निश्चयबुद्धि की निशानियाँ - निश्चित विजयी और सदा निश्चिन्त स्थिति का अनुभव)

**ನಿರಾಕಾರನು, ಸರ್ವಶಕ್ತಿವಂತನೂ ಆದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಮತ್ತು ಆ ಸಂಬಂಧಗಳ ಕರ್ತವ್ಯವನ್ನು ಬ್ರಾಹ್ಮಣ ಜೀವನದಲ್ಲಿ ನಿಭಾಯಿಸಿದಾಗ ಆತ್ಮಿಕ ಸ್ಥಿತಿ ಸಹಜವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

- ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.
- ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.
- ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.
- ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಸರ್ವ ಮಕ್ಕಳ ರಕ್ಷಕ ಹಾಗೂ ಶಿಕ್ಷಕರಾದ ಬಾಪ್‌ದಾದಾರವರು ತನ್ನ ಎಲ್ಲಾ ಬ್ರಾಹ್ಮಣ ಮಕ್ಕಳ ಪೌಂಡೇಶನ್‌ನ್ನು (ತಳಪಾಯ, ಬುನಾದಿ) ನೋಡುತ್ತಿದ್ದರು. ಇದಂತೂ ಎಲ್ಲರೂ ತಿಳಿದುಕೊಂಡಿದ್ದೀರಿ- ವರ್ತಮಾನ ಶ್ರೇಷ್ಠ ಜೀವನದ ಫೌಂಡೇಶನ್ ನಿಶ್ಚಯವಾಗಿದೆ. ಎಷ್ಟು ಫೌಂಡೇಶನ್ ಪಕ್ಕಾ ಇರುತ್ತದೆಯೋ ಅಷ್ಟೇ ಆದಿಯಿಂದ ಇಲ್ಲಿಯವರೆಗೂ ಸಹಜ ಯೋಗಿ, ನಿರ್ಮಲ ಸ್ವಭಾವ. ಶುಭ ಭಾವನೆಯ ವೃತ್ತಿ ಹಾಗೂ ಆತ್ಮಿಕ ದೃಷ್ಟಿಯು ಸದಾ ನ್ಯಾಚುರಲ್(ಸ್ವಾಭಾವಿಕ) ರೂಪದಲ್ಲಿ ಅನುಭವವಾಗುತ್ತದೆ. ಪ್ರತಿ ಸಮಯ ಚಲನೆ ಹಾಗೂ ಚಹರೆಯಿಂದ ಅದರ ಹೊಳಪು ಅನುಭವ ಆಗುತ್ತದೆ ಏಕೆಂದರೆ ಬ್ರಾಹ್ಮಣ ಜೀವನದಲ್ಲಿ ಕೇವಲ 'ನಾನು ಇದಾಗಿದ್ದೇನೆ ಹಾಗೂ ನನ್ನ ತಂದೆ ಇವರಾಗಿದ್ದಾರೆ' ಎಂದು

ತಿಳಿದುಕೊಳ್ಳುವುದಲ್ಲ. ಆದರೆ ತಿಳಿದುಕೊಳ್ಳುವುದರ ಅರ್ಥವಾಗಿದೆ. ಏನನ್ನು ತಿಳಿದುಕೊಂಡಿದ್ದೇನೆಯೋ ಅದನ್ನು ಒಪ್ಪಿಕೊಳ್ಳುವುದು ಹಾಗೂ ಅದರಂತೆ ನಡೆಯುವುದು.

ಬಾಪ್‌ದಾದಾರವರು ನೋಡುತ್ತಿದ್ದರು- ಯಾವ ಮಕ್ಕಳೆಲ್ಲರೂ ತಮ್ಮನ್ನು ಬ್ರಾಹ್ಮಣರು ಎಂದು ಕರೆಯಿಸಿಕೊಳ್ಳುತ್ತಾರೆಯೋ ಅವರೆಲ್ಲರೂ ಹೆಮ್ಮೆಯಿಂದ ತಕ್ಷಣ ಹೇಳುತ್ತಾರೆ ನಾವು ನಿಶ್ಚಯ ಬುದ್ದಿಯವರಾಗಿದ್ದೇವೆ ಎಂದು. ಬಾಪ್‌ದಾದಾರವರು ಸಹ ನಿಶ್ಚಯಬುದ್ಧಿಯ ಇದೇ ಮಕ್ಕಳನ್ನು ಕೇಳುತ್ತಾರೆ. ನೀವೆಲ್ಲರೂ "ನಾವು ನಿಶ್ಚಯ ಬುದ್ದಿ ವಿಜಯಿಗಳಾಗಿದ್ದೇವೆ" ಎಂದು ಹೇಳುತ್ತೀರಿ. ಎಂದ ಮೇಲೆ ಕೆಲವೊಮ್ಮೆ ವಿಜಯ, ಕೆಲವೊಮ್ಮೆ ಸೋಲು ಏಕೆ ಉಂಟಾಗುತ್ತದೆ' ಕೆಲವೊಮ್ಮೆ ಸ್ವಲ್ಪ ಏರುಪೇರು ಆಗುತ್ತದೆ. ಏಕೆ ಆಗುತ್ತದೆ? ಆ ಸಮಯದಲ್ಲಿ ನಿಶ್ಚಯ ಸಮಾಪ್ತಿ ಆಗಿಬಿಡುತ್ತದೆಯೇ? ಯಾವಾಗ ಸದಾ ನಿಶ್ಚಯಬುದ್ಧಿಯುಳ್ಳವರಾಗಿದ್ದೀರಿ ಎಂದ ಮೇಲೆ ಸದಾ ವಿಜಯಿ ಆಗಿದ್ದೀರೋ ಅಥವಾ ಮಧ್ಯ ಮಧ್ಯದಲ್ಲಿ ಗುಟ್ಕಾ ಹಾಗೂ ಜುಟುಕ (ಏರುಪೇರು) ಆಗುತ್ತದೆಯೇ? ನಿಶ್ಚಯದ ಫೌಂಡೇಶನ್ ನಾಲ್ಕೂ ಕಡೆಯಿಂದ ಬಲಶಾಲಿಯಾಗಿದೆಯೇ ಅಥವಾ ನಾಲ್ಕು ಕಡೆಯ ಬದಲಾಗಿ ಕೆಲವೊಮ್ಮೆ ಒಂದು ಕಡೆ ಕೆಲವೊಮ್ಮೆ ಇನ್ನೊಂದು ಕಡೆ ಸಡಿಲವಾಗಿ ಬಿಡುತ್ತದೆಯೇ? ಯಾವುದೇ ವಸ್ತುವನ್ನು ಬಲಶಾಲಿ ಮಾಡಬೇಕಾದಾಗ ನಾಲ್ಕು ಕಡೆಯಿಂದ ಟೈಟ್ ಮಾಡಲಾಗುತ್ತದೆ ಅಲ್ಲವೇ. ಒಂದು ಬೇಳೆ ಒಂದು ಸೈಡಿನಲ್ಲಿಯೂ ಸ್ವಲ್ಪವಾದರೂ ಏರುಪೇರು ಇದ್ದರೆ ಅಲುಗಾಡುತ್ತದೆಯಲ್ಲವೇ! ಎಂದ ಮೇಲೆ ನಾಲ್ಕು ಪ್ರಕಾರದ ನಿಶ್ಚಯ ಅರ್ಥಾತ್ ತಂದೆಯ ಮೇಲೆ, ಸ್ವಯಂನ ಮೇಲೆ, ಡ್ರಾಮಾದ ಮೇಲೆ ಹಾಗೂ ಬ್ರಾಹ್ಮಣ ಪರಿವಾರದ ಮೇಲಿನ ನಿಶ್ಚಯ ಈ ನಾಲ್ಕು ಕಡೆಯ ನಿಶ್ಚಯವನ್ನು ಕೇವಲ ತಿಳಿದುಕೊಳ್ಳುವುದಲ್ಲ ಆದರೆ ಒಪ್ಪಿಕೊಂಡು ಅದರಂತೆ ನಡೆಯುವುದು. ಒಂದು ವೇಳೆ ತಿಳಿದುಕೊಂಡಿದ್ದೀರಿ ಆದರೆ ಅದರಂತೆ ನಡೆಯುವುದಿಲ್ಲ ಎಂದರೆ ವಿಜಯದಲ್ಲಿ ಹೆಚ್ಚು ಕಡಿಮೆ ಆಗುತ್ತದೆ. ಯಾವ ಸಮಯ ವಿಜಯದಲ್ಲಿ ಹೆಚ್ಚು ಕಡಿಮೆ ಆಗುತ್ತದೆಯೋ ಆಗ ಚೆಕ್ ಮಾಡಿಕೊಳ್ಳಿ- ನಾಲ್ಕು ಕಡೆಯಲ್ಲಿ ಯಾವ ಕಡೆ ಏರುಪೇರು ಇದೆ ಎಂದು? ಬಾಪ್‌ದಾದಾರವರು ನೋಡುತ್ತಾರೆ- ಕೆಲವು ಮಕ್ಕಳಿಗೆ ತಂದೆಯ ಮೇಲೆ ಸಂಪೂರ್ಣ ನಿಶ್ಚಯವಿದೆ. ಇದರಲ್ಲಿ ಪಾಸ್ (ಉತ್ತೀರ್ಣ) ಆಗಿದ್ದಾರೆ ಆದರೆ ತಮ್ಮ ಮೇಲೆ ಯಾವ ನಿಶ್ಚಯವಿರಬೇಕೋ ಅದರಲ್ಲಿ ಅಂತರ ಬಂದುಬಿಡುತ್ತದೆ. ತಿಳಿದುಕೊಂಡಿದ್ದಾರೆ. ನಾನು ಇದಾಗಿದ್ದೇನೆ ನಾನು ಹೀಗಿದ್ದೇನೆ ಎಂದು ಸಹ ಹೇಳುತ್ತಾರೆ. ಆದರೆ ಯಾವುದನ್ನು ತಿಳಿದುಕೊಂಡಿದ್ದಾರೆ. ಯಾವುದನ್ನು ಒಪ್ಪಿಕೊಂಡಿದ್ದಾರೆಯೋ ಅದು ಸ್ವರೂಪದಲ್ಲಿ, ಚಲನೆಯಲ್ಲಿ, ಕರ್ಮದಲ್ಲಿ ಇರಲಿ ಇದರಲ್ಲೇ ಅಂತರ ಬಂದುಬಿಡುತ್ತದೆ. ಒಂದು ಕಡೆ ಯೋಚಿಸುತ್ತಾರೆ ನಾನು ಮಾಸ್ಟರ್ ಸರ್ವಶಕ್ತಿವಂತನಾಗಿದ್ದೇನೆ, ವಿಶ್ವಕಲ್ಯಾಣಕಾರಿಯಾಗಿದ್ದೇನೆ. ಇನ್ನೊಂದು ಕಡೆ ಚಿಕ್ಕದೊಂದು ಪರಿಸ್ಥಿತಿಯ ಮೇಲೆಯೂ ಸಹ ವಿಜಯ ಪ್ರಾಪ್ತಿ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ ಎಂದ ಮೇಲೆ ಮಾಸ್ಟರ್ ಸರ್ವಶಕ್ತಿವಾನ್ ಆಗಿದ್ದೀರಿ ಆದರೆ "ಈ ಪರಿಸ್ಥಿತಿ ಬಹಳ ದೊಡ್ಡದಾಗಿದೆ, ಈ ಮಾತೆ ಇಂತಹದ್ದಾಗಿದೆ!" ಎಂದು ಹೇಳುತ್ತೀರಿ. ಇದು ನಿಶ್ಚಯವಾಗಿದೆಯೇ ಅಥವಾ ಕೇವಲ ತಿಳಿದುಕೊಳ್ಳುವುದಾಗಿದೆಯೇ? ಆದರೆ ಒಪ್ಪಿಕೊಂಡು ನಡೆಯುವುದಾಗಿಲ್ಲವೇ? ನಾನು ವಿಶ್ವಕಲ್ಯಾಣಕಾರಿಯಾಗಿದ್ದೇನೆ ಎಂದು ಹೇಳುತ್ತೀರಿ ಹಾಗೂ ಯೋಚಿಸುತ್ತೀರಿ ಆದರೆ ವಿಶ್ವವನ್ನು ಬಿಡಿ. ಸ್ವಕಲ್ಯಾಣದಲ್ಲಿಯೂ ಸಹ ಬಲಹೀನರಾಗಿರುತ್ತೀರಿ. ಒಂದು ವೇಳೆ ಆ ಸಮಯ ಅವರಿಗೆ ಸ್ವಯಂ ಅನ್ನು ಪರಿವರ್ತನೆ ಮಾಡಿ ಸ್ವಕಲ್ಯಾಣಕಾರಿ

ಆಗಲು ಸಾಧ್ಯವಿಲ್ಲವೇ? ಎಂದು ಕೇಳಿದರೆ ಅವರು ಉತ್ತರ ಕೊಡುತ್ತಾರೆ- ನಾವಂತೂ ವಿಶ್ವಕಲ್ಯಾಣಕಾರಿಯಾಗಿದ್ದೇವೆ ಆದರೆ ಸ್ವಕಲ್ಯಾಣ ಬಹಳ ಕಷ್ಟವಾಗಿದೆ! ಈ ಮಾತನ್ನು ಪರಿವರ್ತನೆ ಮಾಡುವುದು ಬಹಳ ಕಷ್ಟವಾಗಿದೆ! ಹಾಗಾದರೆ ವಿಶ್ವಕಲ್ಯಾಣಕಾರಿ ಎಂದು ಕರೆಯುತ್ತಾರೆಯೇ ಅಥವಾ ಬಲಹೀನರು ಎಂದು ಕರೆಯುತ್ತಾರೆಯೇ? ಸ್ವಯಂನಲ್ಲೂ ಸಹ ಪರಿಸ್ಥಿತಿಯ ಪ್ರಮಾಣ, ಸಮಯ ಪ್ರಮಾಣ, ಸಂಬಂಧ ಸಂಪರ್ಕದ ಪ್ರಮಾಣ ನಿಶ್ಚಯ ಸ್ವರೂಪದಲ್ಲಿ ಬನ್ನಿ, ಇಂತಹ ನಿಶ್ಚಯ ಬುದ್ಧಿಯವರ ವಿಜಯ ಆಗಿಯೇ ಬಿಟ್ಟಿದೆ. ಹೇಗೆ ಎಲ್ಲರಿಗೂ ನಾನು ಶ್ರೇಷ್ಠ ಆತ್ಮನಾಗಿದ್ದೇನೆ ಎಂಬ ನಿಶ್ಚಯ ಪಕ್ಕಾ ಇದೆ. ಅದಕ್ಕಾಗಿ ಯಾವುದೇ ಪ್ರಪಂಚದ ವಿಚಾರಗಳು ಸಹ ನೀವು ಆತ್ಮ ಅಲ್ಲ ಶರಿರವಾಗಿದ್ದೀರಿ ಎಂದು ಹೇಳಿ ನಿಮ್ಮನ್ನು ಏರುಪೇರಿನಲ್ಲಿ ತರುವ ಪ್ರಯತ್ನ ಮಾಡಿದರೂ ನೀವು ಒಪ್ಪಿಕೊಳ್ಳುವುದಿಲ್ಲ, ಬದಲಾಗಿ ಅವರನ್ನೇ ಒಪ್ಪಿಸುತ್ತೀರಿ ಎಂದ ಮೇಲೆ ಹೇಗೆ ನಾನು ಶರೀರವಲ್ಲ ನಾನು ಆತ್ಮನಾಗಿದ್ದೇನೆ. ಎನ್ನುವುದು ಪಕ್ಕಾ ಇದೆ, ಹಾಗೂ ಯಾವ ಅತ್ಮನಾಗಿದ್ದೇನೆ ಇದು ಸಹ ಪಕ್ಕಾ ಇದೆ. ಇಂತಹ ನಿಚ್ಚಯ ಬುದ್ಧಿ ಆತ್ಮರಿಗೆ ವಿಜಯ ಸಹ ಅಷ್ಟೇ ನಿಶ್ಚಿತವಾಗಿದೆ ಸೋಲು ಅಸಂಭವವಾಗಿದೆ ಹಾಗೂ ವಿಜಯ ನಿಶ್ಚಿತವಾಗಿದೆ. ಮಾತುಗಳು ಅಂತ್ಯದವರೆಗೂ ಬರಲೇಬೇಕು- ಇದು ಸಹ ನಿಶ್ಚಿತವಾಗಿದೆ. ಆದರೆ ಅದರಲ್ಲಿ ವಿಜಯಿ ಆಗುವುದಕ್ಕಾಗಿ ಒಂದೇ ಸಮಯದಲ್ಲಿ ನಾಲ್ಕು. ಕಡೆಯ ನಿಶ್ಚಯ ಪಕ್ಕಾ ಇರಬೇಕಾಗಿದೆ. ಮೂರರಲ್ಲಿ ನಿಶ್ಚಯವಿದೆ ಹಾಗೂ ಒಂದರಲ್ಲಿ ನಿಶ್ಚಯವಿಲ್ಲದಿದ್ದರೆ ವಿಜಯ ನಿಶ್ಚಿತವಾಗಿರುವುದಿಲ್ಲ ಆದರೆ ಪರಿಶ್ರಮದ ನಂತರ ವಿಜಯ ಸಿಗುತ್ತದೆ. ನಿಶ್ಚಿತ ವಿಜಯದವರಿಗೆ ಪರಿಶ್ರಮ ಪಡಬೇಕಾಗಿ ಬರುವುದಿಲ್ಲ. ಕೆಲವೊಮ್ಮೆ ಕೆಲವರು ಹೇಳುತ್ತಾರೆ ಬಾಪ್‌ದಾದಾರವರಂತೂ ಬಹಳ ಒಳ್ಳೆಯವರಾಗಿದ್ದಾರೆ. ಇದಂತೂ ಪಕ್ಕಾ ಆಗಿದೆ ಅವರು ನಮ್ಮ ತಂದೆಯಾಗಿದ್ದಾರೆ ಹಾಗೂ ನಾವು ಅವರ ಮಕ್ಕಳಾಗಿದ್ದೇವೆ. ನಮ್ಮದು ತಂದೆಯೊಂದಿಗೆ ಸಂಬಂಧವಿದೆ. ಆದರೆ ಪರಿವಾರದೊಂದಿಗೆ ಕಿರಿಕಿರಿ ಆಗುತ್ತದೆ ಆದ್ದರಿಂದ ಪರಿವಾರದೊಂದಿಗೆ ನಿಶ್ಚಯ ಏರುಪೇರು ಆಗಿ ಹೋಗುತ್ತದೆ ಆದ್ದರಿಂದ ಪರಿವಾರವನ್ನು ಬಿಟ್ಟುಬಿಡುತ್ತೇವೆ, ಸಡಿಲ ಮಾಡಿ ಬಿಡುತ್ತೇವೆ ಅರ್ಥಾತ್ ಒಂದು ಸೈಡ್ ಸಡಿಲವಾಯಿತಲ್ಲವೇ. ಪರಿವಾರವಿಲ್ಲದೆ ಮಾಲೆಯಲ್ಲಿ ಹೇಗೆ ಬರುವಿರಿ? ಬರಬೇಕೇ? ಬೇಡವೇ? ಮಾಲೆಯಲ್ಲಿ ಬರಬೇಕೇ? ಎಲ್ಲರೂ ಬರಬೇಕೇ? 108 ಅಥವಾ 16108ರಲ್ಲಿ ಬರಬೇಕು. 108ರಲ್ಲಿ ಬರಬೇಕು ಆದರೆ ಇಲ್ಲಿ ಕುಳಿತಿರುವವರು 3000 ಜನ. ಆದರೆ 3000 ಜನದಲ್ಲಿ ಯಾರು 108ರಲ್ಲಿ ಬರುತ್ತೀರಿ. ಎಲ್ಲರೂ ಬರುತ್ತೀರಾ ಹಾಗಾದರೆ ಮಾಲೆಯ ನಂಬರ್ ಬೆಳೆದುಬಿಡುತ್ತದೆ. ಮಾಲೆ ಯಾವಾಗ ತಯಾರಾಗುತ್ತದೆ. ಮಣಿ ಮಣಿಯೊಂದಿಗೆ ಸೇರಿ, ಒಂದೇ ದಾರದಿಂದ ಪೋಣಿಸಲ್ಪಟ್ಟಾಗ ಮಾಲೆ ತಯಾರಾಗುತ್ತದೆ. ಒಂದು ವೇಳೆ ಬೇರೆ ಬೇರೆ ಸೂತ್ರದಲ್ಲಿ ಬೇರೆ ಬೇರೆ ಮಣಿಗಳಿದ್ದರೆ ಅದನ್ನು ಮಾಲೆ ಎಂದು ಹೇಳಲಾಗುವುದಿಲ್ಲ ಎಂದ ಮೇಲೆ ಪರಿದಾರದಿಂದಲೇ ಮಾಲೆ ತಯಾರಾಗುತ್ತದೆ. ಒಂದು ವೇಳೆ ಪರಿವಾರವನ್ನು ಬಿಟ್ಟು ಬೇರೆ ಮೂರು ನಿಶ್ಚಯಗಳು ಪಕ್ಕಾ ಇದ್ದರೂ ಸಹ ವಿಜಯ ನಿಶ್ಚಿತವಾಗಿ ಇರುವುದಿಲ್ಲ, ಹೋಗಲಿ ಪರಿವಾರದ ಕಿರಿಕಿರಿಯಿಂದ ಬದಿಗೆ ಸರಿದುಬಿಡಿ. ತಂದೆಯ ಆಸರೆಯಾಗಿದ್ದೀರಿ. ಪರಿವಾರಕ್ಕಾಗಿ ಮೂಲೆಗುಂಪಾದರೆ, ನಡೆಯುವುದೇ? ತಂದೆಯಿಂದ ಕೆಲಸವಿದೆಯೇ ಅಥವಾ ಸಹೋದರ ಸಹೋದರಿಯರಿಂದ ಕೆಲಸವಿದೆಯೇ? ತಂದೆಯೊಂದಿಗೆ ಕೆಲಸವಿದೆ, ಅಸ್ತಿಯೂ(ವಾರಸತ್ವ) ತಂದೆಯಿಂದ ಸಿಗಬೇಕು. ಸಹೋದರ ಸಹೋದರಿಯರಿಂದ ಸಿಗುತ್ತದೆಯೇ? ಆದರೆ ಬ್ರಾಹ್ಮಣ ಜೀವನದಲ್ಲಿ ಇದೇ ಭಿನ್ನತೆಯಾಗಿದೆ- ಧರ್ಮ ಹಾಗೂ ರಾಜ್ಯ ಎರಡರ ಸ್ಥಾಪನೆಯಾಗುತ್ತದೆ, ಕೇವಲ ಧರ್ಮದ ಸ್ಥಾಪನೆ ಅಲ್ಲ. ಧರ್ಮಪಿತರು ಕೇವಲ ಧರ್ಮದ ಸ್ಥಾಪನೆಯನ್ನು ಮಾಡುತ್ತಾರೆ.

ತಂದೆಯ ವಿಶೇಷತೆಯಾಗಿದೆ ಧರ್ಮ ಹಾಗೂ ರಾಜ್ಯದ ಸ್ಥಾಪನೆ ಮಾಡುವುದು ಆದ್ದರಿಂದಲೇ ನೀವು ಸಹಜ ರಾಜಯೋಗ ಎಂದು ಕರೆಯುತ್ತೀರಿ. ಎಂದ ಮೇಲೆ ರಾಜ್ಯದಲ್ಲಿ ಒಬ್ಬ ರಾಜ ಏನು ಮಾಡುವನು? ಭಲೇ ಒಳ್ಳೆಯ ಸಿಂಹಾಸನವೂ ಇದೆ. ಕಿರೀಟವು ಇದೆ. ಏನು ಪ್ರಯೋಜನ? ರಾಜಧಾನಿಯೂ ಸಹ ಬೇಕಲ್ಲವೇ? ಎಂದ ಮೇಲೆ ರಾಜಧಾನಿ ಅರ್ಥಾತ್ ಬ್ರಾಹ್ಮಣ ಪರಿವಾರವೇ ರಾಜಪರಿವಾರ ಆದ್ದರಿಂದ ಬ್ರಾಹ್ಮಣ ಪರಿವಾರ ದಲ್ಲಿ ಪ್ರತಿ ಪರಿಸ್ಥಿತಿಯಲ್ಲಿ ನಿಶ್ಚಯ ಬುದ್ಧಿ, ಆಗಲೇ ರಾಜ್ಯ ಭಾಗ್ಯದಲ್ಲಿಯೂ ಸಹ ಸದಾ ರಾಜ್ಯಾಧಿಕಾರಿ ಆಗುವಿರಿ. ಹೀಗೆ ತಿಳಿದುಕೊಳ್ಳಬೇಡಿ- ಪರಿವಾರದೊಂದಿಗೆ ಒಳ್ಳೆಯ ಸಂಬಂಧವಿಲ್ಲ ಎಂದರೆ ಯಾವುದೇ ತೊಂದರೆ ಇಲ್ಲ. ತಂದೆಯೊಂದಿಗಂತೂ ಚೆನ್ನಾಗಿದ್ದೇವೆ ಅಲ್ಲವೇ! ಡ್ರಾಮಾ ಒಂದು ವೇಳೆ ಮರೆತು ಹೋಗುತ್ತದೆ ಎಂದರೆ ತಂದೆಯಂತೂ ನೆನಪಿದ್ದೇ ಇರುತ್ತಾರೆ! ಆದರೆ ಯಾವುದೇ ಬಲಹೀನತೆಯಾದರೂ ಒಂದೇ ಸಮಯದಲ್ಲಿ ಇರುತ್ತದೆ. ಸ್ವಸ್ಥಿತಿ ಅರ್ಥಾತ್ ಸ್ವ ನಿಶ್ಚಯವು ಸಹ ಒಂದು ವೇಳೆ ಬಲಹೀನವಾಗಿರುತ್ತದೆ ಎಂದರೆ ವಿಜಯ ನಿಶ್ಚಿತವಾಗುವುದಕ್ಕೆ ಬದಲಾಗಿ ಏರುಪೇರಿನಲ್ಲಿ ಬಂದುಬಿಡುತ್ತೀರಿ. ಎಂದ ಮೇಲೆ ಬಾಪ್‌ದಾದಾ ನಿಶ್ಚಯದ ಫೌಂಡೇಶನ್‌ಅನ್ನು ಪರಿಶೀಲಿಸುತ್ತಿದ್ದರು. ಏನು ನೋಡಿದರು?

ಸದಾ ನಾಲ್ಕು ಪ್ರಕಾರದ ನಿಶ್ಚಯಗಳು ಒಂದೇ ಸಮಯದಲ್ಲಿ ಜೊತೆಯಾಗಿರುತ್ತಿಲ್ಲ. ಕೆಲವೊಮ್ಮೆ ಇರುತ್ತದೆ ಕೆಲವೊಮ್ಮೆ ಅಲುಗಾಡುತ್ತದೆ ಆದ್ದರಿಂದ ಸದಾ ವಿಜಯದ ಅನುಭವ ಮಾಡಲು ಆಗುವುದಿಲ್ಲ ನಂತರ ಯೋಚಿಸುತ್ತಾರೆ- ಇದಂತೂ ಆಗಬೇಕಾಗಿತ್ತು, ಆದರೆ ಏಕೆ ಆಗುತ್ತಿಲ್ಲ ಗೊತ್ತಾಗುತ್ತಿಲ್ಲ? ಬಹಳ ಪರಿಶ್ರಮವಂತೂ ಮಾಡಿದ್ದೆ, ಒಳ್ಳೆಯ ಯೋಚನೆಯು ಸಹ ಮಾಡಿದ್ದೆ.... ಆದರೆ ಯೋಚಿಸುವುದು ಹಾಗೂ ಆಗುವುದು ಇದರಲ್ಲಿ ಅಂತರ ಬಂದುಬಿಡುತ್ತದೆ. ಇದರ ಅರ್ಥವೇ ಆಗಿದೆ- ನಿಶ್ಚಯದ ನಾಲ್ಕೂಕಡೆ ಬಲಶಾಲಿಯಾಗಿಲ್ಲ. ಹಾಗೂ ನಗುವಂತಹ ಮಾತಂತೂ ಇದಾಗಿದೆ- ಡ್ರಾಮ ಎಂದು ಸಹ ಹೇಳುತ್ತಿರುವಿರಿ, ಡ್ರಾಮನೇ ಆಗಿದೆ, ಡ್ರಾಮವೇ ಆಗಿದೆ...... ಆದರೆ ಒಳಗಡೆಯಿಂದ ಚೆನ್ನಾಗಿ ಏರುಪೇರು ಆಗುತ್ತಿದ್ದೀರಿ. ಕೆಲವೊಮ್ಮೆ ಸಂಕಲ್ಪದಲ್ಲಿ ಅಲುಗಾಡುತ್ತಿರಿ, ಕೆಲವೊಮ್ಮೆ ಮಾತಿನವರೆಗೂ ಸಹ ಅಲುಗಾಡುತ್ತಿರಿ, ಕೆಲವೊಮ್ಮೆ ಕರ್ಮದವರೆಗೂ ಸಹ ಅಲುಗಾಡುತ್ತಿರಿ. ಆ ಸಮಯ ಹೇಗೆ ಅನಿಸುತ್ತದೆ, ದೃಶ್ಯವನ್ನು ಎದುರುಗಡೆ ತನ್ನಿ, ಡ್ರಾಮಾ ಡ್ರಾಮಾ ಎಂದು ಸಹ ಹೇಳುತ್ತಿರುವಿರಿ ಹಾಗೂ ಏರುಪೇರು ಆಗುತ್ತಿದ್ದೀರಿ! ಆದರೆ ನಿಶ್ಚಯ ಬುದ್ಧಿಯ ಚಿಹ್ನೆ ಯಾಗಿದೆ ನಿಶ್ಚಿತವಾದ ವಿಜಯ. ಒಂದು ವೇಳೆ ವಿಧಿ ಸರಿಯಾಗಿದ್ದರೆ ಸಿದ್ಧಿ ಪ್ರಾಪ್ತಿ ಆಗದೆ ಇರಲು ಸಾಧ್ಯವೇ ಇಲ್ಲ. ಯಾವಾಗಲಾದರೂ ಯಾವುದಾರೂ ಕಾರ್ಯದಲ್ಲಿ ವಿಜಯ ಪ್ರಾಪ್ತಿ ಆಗುತ್ತಿಲ್ಲವೆಂದರೆ ತಿಳಿದುಕೊಳ್ಳಿ ನಿಶ್ಚಯ ಕಡಿಮೆ ಇದೆ. ನಾಲ್ಕು ಸೈಡ್ ಚೆಕ್ ಮಾಡಿಕೊಳ್ಳಿ. ಒಂದು ಸೈಡ್ ಅಲ್ಲ.

ಇನ್ನೊಂದು ಮಾತೇನೆಂದರೆ, ಹೇಗೆ ನಿಶ್ಚಯ ಬುದ್ಧಿಯ ಚಿಹ್ನೆ ನಿಶ್ಚಿತ ವಿಜಯವಾಗಿದೆಯೋ ಅದೇ ರೀತಿ ನಿಶ್ಚಿಂತರಾಗಿರುತ್ತಾರೆ. ಯಾವುದೇ ವ್ಯರ್ಥ ಚಿಂತನೆ ಬರಲು ಸಾಧ್ಯವೇ ಇಲ್ಲ. ಶುಭ ಚಿಂತನೆಯನ್ನು ಬಿಟ್ಟು ವ್ಯರ್ಥ ಚಿಂತನೆಯ ನಾಮರೂಪಗಳು ಕೂಡ ಇರುವುದಿಲ್ಲ. ವ್ಯರ್ಥ ಬರುತ್ತದೆ ಹಾಗೂ ನೀವು ಓಡಿಸುತ್ತೀರಿ ಹೀಗಲ್ಲ. ನಿಶ್ಚಯ ಬುದ್ಧಿಯ ಮುಂದೆ ವ್ಯರ್ಥ ಬರಲು ಸಾಧ್ಯವಿಲ್ಲ. ಏಕೆಂದರೆ ಏಕೆ, ಏನು ಹಾಗೂ ಹೇಗೆ- ಇದು ವ್ಯರ್ಥವಾಗಿರುತ್ತದೆ. ಯಾವಾಗ ಡ್ರಾಮಾದ ರಹಸ್ಯವನ್ನು ತಿಳಿದುಕೊಂಡಿರುತ್ತೀರಿ. ಆದಿ ಮಧ್ಯ- ಅಂತ್ಯವನ್ನು ತಿಳಿದುಕೊಂಡಿರುವವರಾಗಿದ್ದೀರೋ, ಯಾರು ಡ್ರಾಮದ

ಆದಿ ಮಧ್ಯ ಅಂತ್ಯವನ್ನು ತಿಳಿದಿದ್ದಾರೆಯೋ ಅವರು ಚಿಕ್ಕ ಚಿಕ್ಕ ಮಾತಿನ ಆದಿ ಮಧ್ಯ ಅಂತ್ಯವನ್ನು ತಿಳಿದಿರುವುದಿಲ್ಲವೇ! ತಿಳಿದಿರುವುದಿಲ್ಲ ಎಂದರೆ ಏಕೆ, ಏನು, ಹೇಗೆ, ಹೀಗೆ - ಇಂತಹ ವ್ಯರ್ಥ ಸಂಕಲ್ಪಗಳು ನಡೆಯುತ್ತವೆ. ಒಂದುವೇಳೆ ಡ್ರಾಮಾದ ಮೇಲೆ ಅಚಲ ನಿಶ್ಚಯವಿದ್ದರೆ, ನಾಲೆಜ್ ಫುಲ್ ಸಹ ಆಗಿರುತ್ತೀರಿ. ಪವರ್ ಫುಲ್ ಸಹ ಆಗಿರುತ್ತೀರಿ ಎಂದ ಮೇಲೆ ವ್ಯರ್ಥ ಸಂಕಲ್ಪ ನಿಮ್ಮನ್ನು ಏರುಪೇರಿನಲ್ಲಿ ತರುವ ಸಾಹಸವು ಸಹ ಮಾಡಲು ಸಾಧ್ಯವಿಲ್ಲ. ಆದರೆ ಯಾವಾಗ ಏರುಪೇರು ಆಗುತ್ತಾರೆಯೋ ಆಗ ಯೋಚಿಸುತ್ತಾರೆ ಗೊತ್ತಿಲ್ಲ ಏನಾಗಿ ಹೋಯಿತು! ಹಾಗೂ ಬಾಪ್‌ದಾದಾರವರು ನಗುತ್ತಾರೆ- ಡ್ರಾಮದ ಆದಿ, ಮಧ್ಯ, ಅಂತ್ಯವನ್ನು ತಿಳಿದುಕೊಂಡಿದ್ದೀರಿ, ತಮ್ಮ 84 ಜನ್ಮಗಳನ್ನು ತಿಳಿದುಕೊಂಡಿದ್ದೀರಿ ಹಾಗೂ ಒಂದು ಮಾತನ್ನು ತಿಳಿದುಕೊಂಡಿಲ್ಲ! ಬಹಳ ಬುದ್ಧಿವಂತರಾಗಿದ್ದೀರಿ! ಬುದ್ಧಿವಂತಿಕೆಯನ್ನು ಸಮಯ ಪ್ರತಿ ಸಮಯ ತೋರಿಸುತ್ತಿರಲ್ಲವೇ! ಕಲ್ಪವೃಕ್ಷದ ಎಲ್ಲಾ ಎಲೆಗಳನ್ನು ತಿಳಿದುಕೊಂಡಿದ್ದೀರಿ ಅಲ್ಲವೇ? ಎಲ್ಲರೂ ವೃಕ್ಷದ ಫೌಂಡೇಶನ್‌ನಲ್ಲಿ ಕುಳಿತಿದ್ದೀರಾ ಅಥವಾ 7-8 ಜನರು ಮಾತ್ರ ಕುಳಿತಿದ್ದೀರಾ? ತಳಪಾಯದಲ್ಲಿ ಕುಳಿತಿರುವವರು ವೃಕ್ಷವನ್ನು ತಿಳಿದುಕೊಂಡಿದ್ದೀರಾ? ಎಲೆ ಎಲೆಯನ್ನು ಸಹ ತಿಳಿದುಕೊಂಡಿದ್ದೀರಿ ಆದರೆ ಇದನ್ನು ಏಕೆ ತಿಳಿದುಕೊಂಡಿಲ್ಲ? ನಿಶ್ಚಯದ ಚಿಹ್ನೆಯಾದ ನಿಶ್ಚಿಂತ ಸ್ಥಿತಿಯ ಅನುಭವವನ್ನು ಮಾಡಿರಿ. ಆಗುತ್ತದೆಯೋ, ಆಗುವುದಿಲ್ಲವೋ, ಏನಾಗುವುದು. ಮಾಡುತ್ತಿದ್ದೇವೆ, ಏನಾಗುತ್ತದೆಯೋ ನೋಡೋಣ, ಇದಕ್ಕೆ ನಿಶ್ಚಿಂತತೆ ಎಂದು ಹೇಳಲಾಗುವುದಿಲ್ಲ. ಹಾಗೂ ನಂತರ ತಂದೆಯ ಮುಂದೆ ಬಂದು ದೂರು ಕೊಡುತ್ತಾರೆ- ನೀವು ಸಹ ಯೋಗಿ ಆಗಿದ್ದೀರಲ್ಲವೇ. ನೀವು ರಕ್ಷಕರಾಗಿದ್ದೀರಲ್ಲವೇ? ನೀವು ಇದಾಗಿರಲ್ಲವೇ ನೀವು ಅದಾಗಿದ್ದೀರಲ್ಲವೇ.. ದೂರು ಹೇಳುವುದು ಅರ್ಥಾತ್ ಅಧಿಕಾರವನ್ನು ಕಳೆದುಕೊಳ್ಳುವುದು. ಇದನ್ನು ಮಾಡಿಬಿಡಿ, ಹೀಗೆ ಆಗಿ ಹೋಗಲಿ ಎಂದು ಅಧಿಕಾರಿಗಳು ದೂರು ಹೇಳುವುದಿಲ್ಲ. ಎಂದ ಮೇಲೆ ನಿಶ್ಚಯ ಬುದ್ಧಿ ಅರ್ಥಾತ್ ನಿಶ್ಚಿಂತತೆ ಎಂದ ಮೇಲೆ ಈ ಪ್ರ್ಯಾಕ್ಟಿಕಲ್ ಚಿಹ್ನೆಗಳನ್ನು ತನ್ನಲ್ಲಿ ಚೆಕ್ ಮಾಡಿಕೊಳ್ಳಿ. ಈ ರೀತಿ ಹುಡುಗಾಟಕೆಯಲ್ಲಿ ಇದ್ದುಬಿಡಬೇಡಿ- ನಾವಂತೂ ನಿಶ್ಚಯ ಬುದ್ಧಿಯವರೇ ಆಗಿದ್ದೇವೆ. ಯಾವ ನಿಶ್ಚಯ ಬಲಹೀನವಾಗಿದೆಯೋ ಅದನ್ನು ಚೆಕ್ ಮಾಡಿ ಹಾಗೂ ಚೇಂಜ್ ಮಾಡಿ. ಕೇವಲ ಚೆಕ್ ಮಾಡಬೇಡಿ. ಬಾಪ್‌ದಾದಾರವರು ಹೇಳಿದ್ದರಲ್ಲವೇ ಚಕ್ಕರ್‌ನ ಜೊತೆ ಜೊತೆಗೆ ಮೇಕರ್ ಸಹ ಆಗಿರಿ. ಕೇವಲ ಚಕ್ಕರ್ ಅಲ್ಲ. ಚೆಕ್ ಮಾಡುವುದರ ಅರ್ಥವೇ ಆಗಿದೆ ಸೆಕೆಂಡ್‌ನಲ್ಲಿ ಚೇಂಜ್ ಆಗುವುದು. ಆದರೆ ಚೆಕ್ ಮಾಡಿ ಹಾಗೂ ಚೇಂಜ್ ಮಾಡದಿದ್ದರೆ ಬಹಳ ಕಾಲದ ಹೃದಯವಿಧೀರ್ಣದ(ಬಲಹೀನತೆಯ) ಸಂಸ್ಕಾರ ಸ್ವಯಂನಲ್ಲಿ ಪಕ್ಕಾ ಆಗುತ್ತಾ ಹೋಗುತ್ತದೆ ಹಾಗೂ ಯಾವುದು ಬಹಳ ಕಾಲದ ಸಂಸ್ಕಾರವಿರುತ್ತದೆಯೋ ಅದು ಅವಶ್ಯವಾಗಿ ಅಂತಿಮದಲ್ಲಿ ಎದುರಿಸುತ್ತದೆ. ಒಂದು ವೇಳೆ ಯಾರಾದರೂ ಹೀಗೆ ಯೋಚಿಸಿದರೆ- ನಾನಂತೂ ಒಬ್ಬ ತಂದೆಯನ್ನು ಬಿಟ್ಟು ಬೇರೆ ಯಾರನ್ನು ಸಹ ಸಂಕಲ್ಪದಲ್ಲೂ ತರುವುದಿಲ್ಲ ಎಂದು. ಆದರೆ ಈ ರೀತಿ ಆಗಲು ಸಾಧ್ಯವಿಲ್ಲ. ಬಹಳ ಕಾಲದ ಅಭ್ಯಾಸವಿರಬೇಕು. ಇಲ್ಲವಾದರೆ ಒಂದು ಸೆಕೆಂಡ್ ಯೋಚಿಸುವಿರಿ- ಶಿವ ಬಾಬಾ, ಶಿವ ಬಾಬಾ ಶಿವ ಬಾಬಾ...... ಹಾಗೂ ಇನ್ನೊಂದು ಸೆಕೆಂಡ್ ಮಾಯೆ ಹೇಳುವುದು- ಇಲ್ಲ. ನಿನ್ನಲ್ಲಿ ಶಕ್ತಿ ಇಲ್ಲ. ನೀನು ಬಲಹೀನನೇ ಆಗಿರುವೆ, ಎಂದ ಮೇಲೆ ಯುದ್ಧ ನಡೆಯುತ್ತಿರುತ್ತದೆ. ಒಂದು ವೇಳೆ ನಿಶ್ಚಯವಿಲ್ಲದಿದ್ದರೆ ಬ್ರಾಹ್ಮಣ ಜೀವನದ ಅಂತಿಮ ಕಾಲದ ಯಾವ ಲಕ್ಷ್ಯವನ್ನು ವರ್ಣನೆ ಮಾಡುತ್ತೀರೋ ಅದು ಸಹಜ ಹೇಗೆ ಆಗುವುದು? ಹಾಗೂ ಒಂದು ವೇಳೆ ಅಂತ್ಯದವರೆಗೆ ಈ ವ್ಯರ್ಥ ಸಂಕಲ್ಪಗಳು ಇದ್ದರೆ ಆಗ ಅದೇ ಭೂತಗಳು ಯಮದೂತರ ರೂಪದಲ್ಲಿ ಬರುವುದು. ಬೇರೆ ಯಾವ ಯಮದೂತರೂ ಬರುವುದಿಲ್ಲ. ಈ ವ್ಯರ್ಥ ಸಂಕಲ್ಪಗಳು, ನಿಮ್ಮ ಬಲಹೀನತೆಗಳೇ ಯಮದೂತರ ರೂಪದಲ್ಲಿ

ಬರುತ್ತವೆ. ಯಮದೂತರು ಏನು ಮಾಡುತ್ತಾರೆ? ಭಯಪಡಿಸುತ್ತಾರೆ. ಹಾಗೂ ಅನ್ಯರು ವಿಮಾನದಲ್ಲಿ ಹೋಗಿಬಿಡುತ್ತಾರೆ ಅರ್ಥಾತ್ ಹಾರುವ ಕಲೆಯಲ್ಲಿ ದಾಟಿ ಪಾರಾಗುತ್ತಾರೆ. ಯಾವುದೇ ವಿಮಾನ ಇರುವುದಿಲ್ಲ ಆದರೆ ಹಾರುವ ಕಲೆಯ ಅನುಭವವಾಗಿದೆ. ಆದ್ದರಿಂದ ಮೊದಲೇ ಚೆಕ್ ಮಾಡಿ ಚೇಂಜ್ ಮಾಡಿ. ಎಲ್ಲಿಯವರೆಗೆ ಮಾಡುತ್ತೀರಿ? ಮಾಡುತ್ತೇವೆ ಎಂದು ಹೇಳಿ ಬಾಪ್‌ದಾದಾ ಅವರನ್ನು ಖುಷಿ ಪಡಿಸಿಬಿಡುತ್ತಿದ್ದೀರಿ. ಈಗಲೂ ಮಾಡಿರಿ. ಮಧುಬನದವರು ಪ್ರತಿಜ್ಞೆ ಮಾಡಿದ್ದಾರೆಯಲ್ಲವೇ ಅದು ಕೇವಲ ಕಾಗದದವರೆಗೆ ಇದೆಯೇ ಅಥವಾ ಪ್ರತ್ಯಕ್ಷ ಜೀವನದಲ್ಲಿದೆಯೇ? ಒಳ್ಳೆಯದು.

ಇಂದು ಮಧುಬನ ನಿವಾಸಿಯರ ಟರ್ನ್ ಸಹ ಆಗಿದೆ. ಮಧುಬನದವರೊಂದಿಗಂತೂ ಬಾಪ್‌ದಾದಾರವರ ವಿಶೇಷ ಸ್ನೇಹವಿದೆ. ಎಲ್ಲರೊಂದಿಗೆ ಇದೆ. ಆದರೂ ಸಹ ಮಧುಬನ ನಿವಾಸಿಯವರೊಂದಿಗೆ ವಿಶೇಷ ಸ್ನೇಹವಿದೆ ಏಕೆಂದರೆ ನಿಮಿತ್ತರಾಗಿದ್ದಾರೆ! ನೀವೆಲ್ಲರೂ ಬಂದಾಗ ಉಪಚಾರವಂತೂ ಚೆನ್ನಾಗಿ ಮಾಡುತ್ತಾರಲ್ಲವೇ. ಮಧುಬನದವರು ಉಪಚಾರ ಮಾಡುವುದರಲ್ಲಿ ಪಾಸ್ ಅಲ್ಲವೇ! ಅತಿಥಿ ಸೇವೆ ಮಾಡುವುದೇ ಮಹಾನತೆಯಾಗಿದೆ. ಯಾರಿಗೆ ಅತಿಥಿ ಸತ್ಕಾರ ಮಾಡುವುದು ಬರುತ್ತದೆಯೋ ಅವರು ಮಹಾನ್ ಆಗಿಯೇ ಬಿಡುತ್ತಾರೆ. ಕೇವಲ ಆಹಾರ ಪಾನೀಯದಲ್ಲ ಆದರೆ ಹೃದಯದಿಂದ ಸ್ನೇಹದ ಅತಿಥಿ ಸತ್ಕಾರ. ಇದು ಎಲ್ಲದಕ್ಕಿಂತ ಶ್ರೇಷ್ಠವಾಗಿದೆ. ಎಷ್ಟು ಬಾರಿಯಾದರೂ ಪಿಕ್ನಿಕ್ ಮಾಡಿ ಆದರೆ ಹೃದಯದ ಸ್ನೇಹ ಸಿಗದಿದ್ದಾಗ ಏನೂ ಸಿಕ್ಕಿಲ್ಲ ಎಂದು ಹೇಳುತ್ತಾರೆ. ಎಂದ ಮೇಲೆ ಮಧುಬನದವರು ಹೃದಯದ ಸ್ನೇಹದಿಂದ ಸೇವೆ ಮಾಡುತ್ತಾರೆ. ಮಾಡುತ್ತಿರಲ್ಲವೇ, ಯಾರಾದರೂ ಏರುಪೇರು ಮಾಡಿದರೆ ನಂತರ ಹೇಳಬೇಡಿ ಬಾಪ್‌ದಾದಾರವರಂತೂ ಹಾಗೆ ಸುಮ್ಮನೆ ಹೇಳಿದರು ಎಂದು? ಹೀಗೆ ಮಾಡಬೇಡಿ, ಸ್ನೇಹದ ಸಾಗರನ ಮಕ್ಕಳಾಗಿದ್ದೀರಲ್ಲದೇ, ಎಲ್ಲಿಯವರೆಗೆ ಸ್ನೇಹವನ್ನು ಕೊಡಬೇಕು....ಎನ್ನಬಾರದು. ಮಡಿಕೆಯ ಮಕ್ಕಳಲ್ಲ, ಸಾಗರನ ಮಕ್ಕಳಾಗಿದ್ದೀರಿ, ಅಪರಿಮಿತವಾಗಿದ್ದೀರಿ,

ಎಲ್ಲರ ಬಳಿ ಸ್ನೇಹದ ಸ್ಟಾಕ್ ಇದೆ ಅಲ್ಲವೇ? ಮಾತೆಯರ ಬಳಿಯೂ ಇದೆಯೇ, ಕುಮಾರಿಯರ ಬಳಿಯೂ ಇದೆಯೇ, ಪಾಂಡವರ ಬಳಿಯೂ ಇದೆಯೇ. ಸಾಗರರಾಗಿದ್ದೀರಿ ಅಥವಾ ಸ್ವಲ್ಪ ಇದೆಯೇ?ಎಂದೂ ಕ್ರೋಧವಂತೂ ಮಾಡುವುದಿಲ್ಲವಲ್ಲವೇ? ಸ್ನೇಹದ ಸಾಗರರಾಗಿದ್ದಾಗ ಕ್ರೋಧ ಎಲ್ಲಿಂದದ ಬಂತು? ಇತರರ ಸಂಸ್ಕಾರವನ್ನು ತಿಳಿದುಕೊಂಡು ಸ್ಯಾಟಿಸ್ ಫೈ (ಸಂತುಷ್ಟ) ಮಾಡುತ್ತೀರಲ್ಲವೇ. ಭಲೇ ಅವರು ತಪ್ಪಾಗಿರಲಿ ಆದರೆ ನೀವು ಜ್ಞಾನ ಪೂರ್ಣರಾಗಿದ್ದೀರಿ ಅಲ್ಲವೇ. ನೀವಂತೂ ತಿಳಿದುಕೊಂಡಿದ್ದೀರಲ್ಲವೇ- ಇವರು ಎಂತಹವರಾಗಿದ್ದಾರೆಂದು, ಆದರೆ ಆ ಸಮಯ ಏನು ಹೇಳುತ್ತಾರೆ- ಇವರು ಹೀಗೆ ಮಾಡಿದರಲ್ಲವೇ. ಹಾಗಾಗಿಯೇ ನಾನು ಸಹ ಹೀಗೆ ಮಾಡಿದೆ. ತಪ್ಪಿನಿಂದ ತಪ್ಪಾಗಿ ಹೋಯಿತು ಎಂದರೆ ಯಾವ ದೊಡ್ಡ ಕೆಲಸ ಮಾಡಿದಿರಿ? ಅವರು ತಪ್ಪು ಮಾಡಿದರು ಹಾಗೂ ನೀವು ಸಹ ಅದರ ಪ್ರತಿಕ್ರಿಯೆ ತಪ್ಪಾಗಿಯೇ ಕೊಟ್ಟಿರಿ. ಹೇಳುತ್ತೀರಲ್ಲವೇ ಕ್ರೋಧ ಒಂದು ಬಾರಿ ಮಾಡಿದರೆ ಏನು ಆಗುವುದಿಲ್ಲ. ಮತ್ತೆ ಮತ್ತೆ ಮಾಡುತ್ತಿರುತ್ತಾರೆ! ಯಾವಾಗ ನೀವು ಇವರ ಸ್ವಭಾವವೇ ಕ್ರೋಧವಾಗಿದೆ ಎಂದು ತಿಳಿದುಕೊಂಡಿದ್ದೀರಿ. ಮತ್ತು ಅವರು ಕ್ರೋಧ ಮಾಡದೆ ಇನ್ನೇನು ಮಾಡುತ್ತಾರೆ? ಅವರ ಕೆಲಸವಾಗಿದೆ ಕ್ರೋಧ ಮಾಡುವುದು ಹಾಗೂ ನಿಮ್ಮ ಕೆಲಸವಾಗಿದೆ ಸ್ನೇಹ ಕೊಡುವುದು ಅಥವಾ ಕ್ರೋದ ಮಾಡುವುದೇ! ಅವರು 10 ಬಾರಿ ಮಾಡಿದರೆ ನೀವು ಒಂದು ಬಾರಿಯಾದರೂ ಅದರ

ಉತ್ತರ ಕೊಡುತ್ತೀರಿ ಅಲ್ಲವೇ? ಕೊಡುವುದಿಲ್ಲ ಎಂದರೆ ಅವರು 20 ಬಾರಿ ಕ್ರೋಧ ಮಾಡುತ್ತಾರೆ. ಆಗ ಏನು ಮಾಡುವಿರಿ? ಎಂದ ಮೇಲೆ ಇಷ್ಟು ಸಹನ ಶಕ್ತಿ ಇದೆಯೇ ಅಥವಾ ಅವರು 10 ಬಾರಿ ಕ್ರೋಧ ಮಾಡಿದರು. ಹಾಗೂ ನೀವು ಅದರ ಅರ್ಥ ಮಾಡಿದರೆ ನಡೆಯುತ್ತದೆಯೇ? ಅವರು ಸುಳ್ಳು ಹೇಳಿದರು, ನೀವು ಕ್ರೋಧ ಮಾಡಿದಿರಿ, ಎಂದ ಮೇಲೆ ಇದು. ಸರಿಯಾಯಿತೆ. ನಂತರ ಬಹಳ ಧೈರ್ಯದಿಂದ ಹೇಳುತ್ತಾರೆ- ಅವರು ಸುಳ್ಳು ಹೇಳಿದರಲ್ಲವೇ. ಆದ್ದರಿಂದಲೇ ಕ್ರೋಧ ಬಂದಿತ್ತು. ಆದರೆ ಸುಳ್ಳು ಹೇಳುವುದಂತು ಒಳ್ಳೆಯದು ಎನಿಸಿಲ್ಲ ಹಾಗೂ ಕ್ರೋಧ ಮಾಡುವುದು ಒಳ್ಳೆಯದು ಎನಿಸಿದೆ! ಸ್ನೇಹದ ಸಾಗರನ ಮಾಸ್ಟರ್ ಸ್ನೇಹದ ಸಾಗರ. ಮಾಸ್ಟರ್ ಸ್ನೇಹದ ಸಾಗರನ ನಯನ, ಚಹರೆ, ವೃತ್ತಿಯಲ್ಲಿ ಬೇರೆ ಯಾವ ಭಾವವು ಸಹ ಬರಲು ಸಾಧ್ಯವಿಲ್ಲ. ಒಂದು ವೇಳೆ ಸ್ವಲ್ಪ ಸ್ವಲ್ಪ ಆವೇಶ ಬರುತ್ತದೆ ಎಂದರೆ ಅವರಿಗೆ ಸ್ನೇಹದ ಸಾಗರ ಎಂದು ಹೇಳಲಾಗುತ್ತದೆಯೇ ಅಥವಾ ಲೋಟವೆಂದು ಹೇಳಲಾಗುತ್ತದೆಯೇ? ಏನು ಬೇಕಾದರೂ ಆಗಲಿ. ಇಡೀ ಪ್ರಪಂಚವೇ ಬೇಕಾದರೆ ನಿಮ್ಮ ಮೇಲೆ ಕ್ರೋಧ ಮಾಡಲಿ ಆದರೆ ಮಾಸ್ಟರ್ ಸ್ನೇಹದ ಸಾಗರ ಪ್ರಪಂಚದ ಕಾಳಜಿ ಮಾಡುವುದಿಲ್ಲ. ನಿಶ್ಚಿಂತ ಚಕ್ರವರ್ತಿಯಾಗಿದ್ದೀರಿ. ಯಾವುದರ ಕಾಳಜಿ ಇತ್ತೋ, ಚಿಂತೆಯಿತ್ತೋ ಅದನ್ನು ಪಡೆದುಬಿಟ್ಟೆವು. ಇನ್ನು ಈ ವ್ಯರ್ಥ ಮಾತುಗಳಿಂದ ನಿಶ್ಚಿಂತ ಚಕ್ರವರ್ತಿ. ಚೆಕಿಂಗ್‌ನ ಕಾಳಜಿ ಮಾಡಿ, ಚೇಂಜ್ ಆಗುವ ಕಾಳಜಿ ತೆಗೆದುಕೊಳ್ಳಿ. ಆದರೆ ವ್ಯರ್ಥದ ಕಾಳಜಿರಹಿತರಾಗಿರಿ. ಮಾಡಬಲ್ಲಿರಾ ಅಥವಾ ಮಕ್ಕಳು, ಮೊಮ್ಮಕ್ಕಳು, ಮರಿ ಮಕ್ಕಳು...... ಸ್ವಲ್ಪ ಕ್ರೋದ ಮಾಡುತ್ತಾರೆ. ಸ್ವಲ್ಪ ಏರುಪೇರು ಮಾಡುತ್ತಾರೆ. ಆಗ ಸ್ನೇಹದ ಬದಲಾಗಿ ಬೇರೆ ಭಾವನೆಯು ಬಂದುಬಿಡುತ್ತದೆ? ಕಚೇರಿಗೆ ಹೋಗುತ್ತೀರಿ, ಬಿಸಿನೆಸ್ ಮಾಡುತ್ತೀರಿ, ನಮಗೆ ನೌಕರಿ ಸಿಕ್ಕಿಬಿಡುತ್ತದೆ. ಇಂತಹ ವಾಯುಮಂಡಲ ಸಿಕ್ಕಿಬಿಡುತ್ತದೆ. ಆದರೆ ವ್ಯರ್ಥದಿಂದ ಕಾಳಜಿ ರಹಿತ ಚಕ್ರವರ್ತಿ ಸಮರ್ಥದಲ್ಲಿ ಕಾಳಜಿರಹಿತ ಆಗಬೇಡಿ. ಕೆಲವರು ಇದನ್ನು ತಪ್ಪಾಗಿ ತಿಳಿದುಕೊಳ್ಳುತ್ತಾರೆ. ಮರ್ಯಾದೆಗಳಲ್ಲಿ ಕೂಡ- ಬಾಬಾ ಹೇಳುತ್ತಾರಲ್ಲವೆ ನಿಶ್ಚಿಂತಚಕ್ರವರ್ತಿಯಾಗಿ ಎಂದು. ಆದರೆ ಮರ್ಯಾದೆಗಳಲ್ಲಿ ನಿಶ್ಚಿಂತಚಕ್ರವರ್ತಿ ಆಗಬಾರದು ನಿಮ್ಮ ಬಿರುದು ಏನಾಗಿದೆ? ಮರ್ಯಾದಾಪುರುಷೋತ್ತಮರು ಈ ಮರ್ಯಾದೆಗಳೇ ಬ್ರಾಹ್ಮಣ ಜೀವನದ ಹೆಜ್ಜೆಗಳು. ಹೆಜ್ಜೆಯ ಮೇಲೆ ಹೆಜ್ಜೆ ಹಾಕದಿದ್ದರೆ ಗುರಿ ಹೇಗೆ ಸಿಗುತ್ತದೆ? ಬ್ರಹ್ಮಾತಂದೆಯ ಹೆಜ್ಜೆಯ ಮೇಲೆ ಹೆಜ್ಜೆಯನ್ನಿಡಿ. ಈ ಮರ್ಯಾದೆಗಳೇ ಹೆಜ್ಜೆಗಳಾಗಿದೆ. ಒಂದು ವೇಳೆ ಈ ಹೆಜ್ಜೆಗಳಲ್ಲಿ ಸ್ವಲ್ಪವೂ ತಂದೆಯ ಹೆಜ್ಜೆಯ ಮೇಲೆ ಹೆಜ್ಜೆಗೆ ಏರುಪೇರು ಆಗುತ್ತದೆ ಎಂದರೆ ಗುರಿಯಿಂದ ದೂರವಾಗಿ ಬಿಡುತ್ತೀರಿ ಹಾಗೂ ನಂತರ ಪರಿಶ್ರಮ ಪಡಬೇಕಾಗುತ್ತದೆ. ಹಾಗೂ ಬಾಪ್‌ದಾದರವರಿಗೆ ಮಕ್ಕಳ ಪರಿಶ್ರಮ ಚೆನ್ನಾಗೆನಿಸುವುದಿಲ್ಲ. ಸಹಜಯೋಗಿ ಎಂದು ಹೇಳುತ್ತಾ ಪರಿಶ್ರಮ ಮಾಡುತ್ತಾರೆ ಎಂದರೆ ಚೆನ್ನಾಗಿನಿಸುವುದೇ? ಒಳ್ಳೆಯದು. (ಬಾಪ್‌ದಾದಾರವರು ಡ್ರಿಲ್ ಮಾಡಿಸಿದರು)

ಎವರೆಡಿ ಆಗಿದ್ದೀರಾ? ಈಗಲೇ ಬಾಪ್‌ದಾದಾ ಎಲ್ಲರೂ ನಡೆಯಿರಿ ಹೋಗೋಣ ಎಂದರೆ ಬಂದು ಬಿಡುತ್ತೀರಾ. ನಾವು ಹೋಗುತ್ತಿದ್ದೇವೆ ಎಂದು ಫೋನ್ ಅಥವಾ ಟೆಲಿಗ್ರಾಂ ಕೊಡಬೇಕು ಎಂದು ಹೇಳುತ್ತೀರಾ? ಟೆಲಿಫೋನ್ ಲೈನ್ ಬರುವುದಿಲ್ಲ ನಿಮ್ಮ ಮನೆಯಲ್ಲಿರುವವರು ಎಲ್ಲಿಗೋ ಹೋಗಿಬಿಟ್ಟಿದ್ದಾರೆ ಎಂದು ಕೊಂಡರೆ ಏನು ಮಾಡುತ್ತೀರಿ? ಹೋಗುವುದಂತೂ ಒಳ್ಳೆಯದೇ ತಾನೆ? ಕ್ಷಣದಲ್ಲಿ ಆತ್ಮ ಹೋಗಿಬಿಡುತ್ತದೆ ಅಥವಾ ಈ ಸಬ್ಜೆಕ್ಟ್ ಳಲ್ಲಿ ಬಲಹೀನವೆಂದು ನೆನಪು ಬರುತ್ತದೆಯೇ? ವಸ್ತುಗಳೆಲ್ಲವುಗಳನ್ನು ತೆಗೆದುಕೊಂಡು ಬರುತ್ತೇವೆ ಎಂದು ವಸ್ತುಗಳ ನೆನಪು ಬರುತ್ತದೆಯೇ? ಅಥವಾ

ನಾವು ಹೋಗುತ್ತಿದ್ದೇವೆ ಎಂದು ಹೇಳಿ ಬರುತ್ತೇವೆ ಎಂಬ ಯೋಚನೆ ಬರುವುದಿಲ್ಲ ತಾನೆ! ಎಲ್ಲರೂ ಬಂಧನ ಮುಕ್ತರಾಗಿದ್ದೀರಾ? ಆದ್ದರಿಂದಲೇ ಈಗಿನಿಂದ ಯಾವುದಾದರೂ ಬಂಗಾರ, ಬೆಳ್ಳಿಯ ದಾರಗಳು ಉಳಿದಿವೆಯೇ ಎಂದು ಪರಿಶೀಲಿಸಿಕೊಳ್ಳಿರಿ. ಕಬ್ಬಿಣದ ಸರಪಳಿಯಂತೂ ಬಹಳ ದಪ್ಪವಾಗಿದ್ದು ಕಾಣಿಸುತ್ತವೆ ಆದರೆ ಬಂಗಾರದ, ಬೆಳ್ಳಿಯ ದಾರಗಳು ಆಕರ್ಷಣೆ ಮಾಡುತ್ತವೆ. ಅಷ್ಟರಮಟ್ಟಿಗೆ ನನ್ನದು ಎಂಬ ಭಾವನೆಯಿಂದ ಮುಕ್ತರಾಗಿದ್ದೀರಾ? ಎಲ್ಲದಕ್ಕಿಂತಲೂ ದೊಡ್ಡ ನನ್ನದು ಎಂಬ ಭಾವನೆ ಇಷ್ಟಕ್ಕೂ ಮುಂಚೆಯೂ ದೇಹ ಭ್ರಾಂತಿಯೊಂದಿಗೆ ದೆಹಭಿಮಾನದ ಬಂಗಾರ ಮತ್ತು ಬೆಳ್ಳಿಯ ದಾರಗಳು ಬಹಳ ಇವೆ ಎಂದು ತಿಳಿಸಿದ್ದೆನು ಆದ್ದರಿಂದ ಸೂಕ್ಷ್ಮ ಬುದ್ಧಿಯಿಂದ, ಸ್ಥೂಲ ಬುದ್ಧಿಯಿಂದ ಅಲ್ಲ ನನ್ನದು ಎನ್ನುತ್ತಲೂ ಏನೂ ಇಲ್ಲ, ಏನು ಇಲ್ಲ ಎನ್ನುವುದಲ್ಲ. ಆಳವಾದ ಬುದ್ಧಿಯಿಂದ ಯಾವುದಾದರೂ ಅಲ್ಪಕಾಲದ ನಶೆಯು ದಾರವಾಗಿ ನಿಲ್ಲಿಸಲು ನಿಮಿತ್ತವಾಗುತ್ತಿಲ್ಲ ತಾನೇ ಎಂದು ಪರಿಶೀಲಿಸಿಕೊಳ್ಳಿರಿ. **ಅನುಸರಿಸುವುದರಲ್ಲಿ ಬ್ರಹ್ಮಾ ತಂದೆಯನ್ನು ಅನುಸರಿಸಿರಿ. ಸರ್ವರ ಪ್ರತಿ ಗುಣ ಗ್ರಾಹಕರಾಗುವುದು ಬೇರೆ ವಿಷಯ ಆದರೆ ಅನುಸರಿಸುವುದರಲ್ಲಿ ತಂದೆಯನ್ನು ಅನುಸರಿಸಬೇಕು. ಕೆಲವರು ಅಣ್ಣಂದಿರನ್ನು, ಅಕ್ಕಂದಿರನ್ನು ಅನುಸರಿಸಬೇಕು ಎಂದುಕೊಳ್ಳುತ್ತಿದ್ದಾರೆ. ಆದರೆ ಅವರು ಕೂಡ ಯಾರನ್ನು ಅನುಸರಿಸುತ್ತಿದ್ದಾರೆ ಅವರು ಬ್ರಹ್ಮಾ ತಂದೆಯನ್ನು ಅನುಸರಿಸುತ್ತಿದ್ದಾರೆ ಮತ್ತೆ ನೀವು ಅವರನ್ನು ಅನುಸರಿಸುತ್ತಿದ್ದೀರಿ. ಡೈರೆಕ್ಟಾಗಿ ಏಕೆ ಅನುಸರಿಸುತ್ತಿಲ್ಲ? ಎಲ್ಲರೂ ಬ್ರಹ್ಮಕುಮಾರರೇ ತಾನೇ? ಅಥವಾ ಇಂತಹ ಅಣ್ಣನ ಕುಮಾರರು ಅಥವಾ ಅಕ್ಕನ ಕುಮಾರರಲ್ಲ ತಾನೇ? ತಂದೆ ಯಾರು? ಬ್ರಹ್ಮಾರವರಲ್ಲವೇ, ತಂದೆಯನ್ನು ಅನುಸರಿಸಿ ಎಂದು ಹೇಳುತ್ತೀರಾ ಅಥವಾ ಅಣ್ಣಂದಿರನ್ನು, ಅಕ್ಕಂದಿರನ್ನು ಅನುಸರಿಸಬೇಕೆಂದು ಹೇಳಲಾಗಿದೆಯೇ. ಎಲ್ಲರಲ್ಲಿ ವಿಶೇಷತೆಗಳನ್ನು ನೋಡಿ ಆದರೆ ಅನುಸರಿಸುವುದರಲ್ಲಿ ತಂದೆಯನ್ನೇ ಅನುಸರಿಸಬೇಕು. ಗೌರವವನ್ನು ಇಡೀ ಆದರೆ ದಾರಿ ತೋರಿಸುವವರು ತಂದೆಯೊಬ್ಬರೇ. ಅಕ್ಕ, ಅಣ್ಣಂದಿರು ಯಾರು ದಾರಿ ತೋರಿಸುವವರಲ್ಲ. ದಾರಿ ತೋರಿಸುವವರು ಒಬ್ಬರೇ ಮತ್ತು ಸಾಕಾರ ಉದಾಹರಣೆ ಬ್ರಹ್ಮಾ ತಂದೆಯಷ್ಟೇ. ತಂದೆಯನ್ನು ಅನುಸರಿಸುತ್ತಿದ್ದೀರಾ ಅಥವಾ ಬ್ರಹ್ಮಾತಂದೆಯನ್ನು ನೋಡಲೇ ಇಲ್ಲ ಎಂದು ಯೋಚಿಸುತ್ತಿದ್ದೀರಾ? ಬ್ರಹ್ಮಾ ತಂದೆಯನ್ನು ನೋಡಲಿಲ್ಲ ತಿಳಿದಿಲ್ಲ ಆದ್ದರಿಂದ ಹೇಗೆ ಅನುಸರಿಸಬೇಕು? ಅನುಸರಿಸುವುದು ಅರ್ಥಾತ್ ಹೆಜ್ಜೆಯ ಮೇಲೆ ಹೆಜ್ಜೆಯನ್ನು ಹಾಕುವುದು ಅದಂತೂ ತಿಳಿದಿದೆ ತಾನೇ ಅಥವಾ ತಿಳಿದಿಲ್ಲವೇ. ಬ್ರಹ್ಮಾ ತಂದೆ ನಮಗೆ ತಿಳಿದಿಲ್ಲ, ನಾವು ನೋಡಿಲ್ಲ, ಟೀಚರ್ಸ್‌ಅನ್ನು ನೋಡಿದ್ದೇವೆ. ಅಣ್ಣಂದಿರು, ಅಕ್ಕಂದಿರನ್ನು ನೋಡಿದ್ದೇವೆ. ತಂದೆಯನ್ನಂತೂ ನೋಡಲಿಲ್ಲ ಎಂದು ಯೋಚಿಸುತ್ತಿಲ್ಲ ತಾನೇ? ಯಾರು ನಿಮಿತ್ತವಾದರೂ ನಿಮಿತ್ತವಾಗಿ ಮಾಡಿರುವುದು ಯಾರು? ನಿಮಗೆ ನೀವೇ ನಿಮಿತ್ತವಾಗಲಿಲ್ಲ ತಾನೇ.** ತಂದೆ ಮಾಡಿದ್ದಾರಲ್ಲವೇ ಅರ್ಥಾತ್ ತಂದೆಯ ಸ್ಮೃತಿ ಬರುತ್ತದೆಯಲ್ಲವೇ? ಒಳ್ಳೆಯದು.

ಎಲ್ಲರೂ ಚೆನ್ನಾಗಿ ಸೆಟ್ ಆಗಿದ್ದೀರಲ್ಲವೇ ಮಲಗುವುದರಲ್ಲಿ, ತಿನ್ನುವುದರಲ್ಲಿ ಚೆನ್ನಾಗಿದೆಯೇ ಅಥವಾ ಪೂರ್ತಿ ಮೂಲೆಯಲ್ಲಿ ಕಳಿಸಿ ಬಿಟ್ಟಿದ್ದಾರೆ ಎಂದು ತಿಳಿಯುತ್ತಿದ್ದೀರಾ? ಭಕ್ತಿ ಮಾರ್ಗದಲ್ಲಿ ಯಾತ್ರೆಗಳಲ್ಲಿ ಎಷ್ಟು ದೂರ ನಡೆಯುತ್ತಿದ್ದಿರಿ ಆದರೆ ನಿಮಗಂತೂ ದೂರವಾಗಿದ್ದರೂ ಕೂಡ ಒಯ್ಯಲು ಬಸ್ಸಿದೆ. ವಿಶ್ರಾಂತಿಯಿಂದ ಬರುತ್ತಿದ್ದೀರಲ್ಲವೇ ಮತ್ತು ಬ್ರಹ್ಮಾಬಾಬಾ ಇದ್ದಾಗಲಂತೂ ಈ ಕೋಚ್ & ಕುರ್ಚಿಗಳು ಇರಲಿಲ್ಲ ಆದರೆ ಈಗ ಕೋಚ್, ಕುರ್ಚಿಗಳು ಇವೆ. ಎಷ್ಟು ವಿಶ್ರಾಂತಿಯಾಗಿ

ಕುಳಿತುಕೊಳ್ಳುತ್ತಿದ್ದೀರಿ. ಬಾಪ್‌ದಾದಾರವರಿಗೆ ಕೂಡ ತಿಳಿದಿದೆ ಹಳೆಯ ಶರೀರವಾದ್ದರಿಂದ ಹಳೆಯ ಶರೀರಗಳಿಗೆ ಸಾಧನಗಳು ಬೇಕು ಎಂದು. ಆದರೆ ಈ ಅಭ್ಯಾಸ ತಪ್ಪದೆ ಮಾಡಿರಿ- ಯಾವ ಸಮಯದಲ್ಲಾದರೂ ಸಾಧನಗಳು ಇಲ್ಲದಿದ್ದರೂ ಸಾಧನೆಗೆ ವಿಘ್ನವಾಗಬಾರದು. ಯಾವುದು ಲಭಿಸಿದರೆ ಅದು ಒಳ್ಳೆಯದು. ಕುರ್ಚಿ ಸಿಕ್ಕರೂ ಒಳ್ಳೆಯದೇ, ನೆಲ ಸಿಕ್ಕರೂ ಒಳ್ಳೆಯದೇ, ಎಲ್ಲರೂ ವಿಶ್ರಾಂತಿಯಿಂದ ಇದ್ದೀರಾ ಅಥವಾ ಮಂಚಗಳು ಬೇಕೇ? ಮನೆಯ ಹತ್ತಿರವಾದರೆ ಮಂಚಗಳ ಮೇಲೆ ನಿದ್ರೆ ಮಾಡುತ್ತೀರಿ, ಇಲ್ಲಿ ಕೂಡ ಮಂಚ ಸಿಕ್ಕರೆ ಏನಿರುತ್ತದೆ? ಬದಲಾವಣೆ ಬೇಕಲ್ಲವೇ ಬದಲಾವಣೆಗಾಗಿ ಎಷ್ಟು ಖರ್ಚು ಮಾಡಿ ಹೋಗುತ್ತೀರಿ. ಅಲ್ಲಿ ಮಂಚಗಳ ಮೇಲೆ ಮಲಗುತ್ತೀರಿ ಇಲ್ಲಿ ಹಾಸಿಗೆ ಮೇಲೆ ಮಲಗುತ್ತಿದ್ದೀರಿ ಅರ್ಥಾತ್ ಬದಲಾವಣೆ ಬಂದಿತಲ್ಲವೇ? ಇದನ್ನಂತು ಹೇಳಿದ್ದೇನೆ- ಎಷ್ಟು ಸಾಧನಗಳು ಹೆಚ್ಚುತ್ತಾ ಹೋಗುತ್ತವೆಯೋ ಅಷ್ಟು ಸಂಖ್ಯೆ ಹೆಚ್ಚಾಗುತ್ತದೆ ಎಂದು. ಈಗ ಜ್ಞಾನ ಸರೋವರ ತಯಾರು ಮಾಡುತ್ತಿದ್ದೀರಿ ಮತ್ತೆ ವರ್ಷದಲ್ಲಿ ಜ್ಞಾನ ಸರೋವರ ಸಣ್ಣದಾಗಿ ಬಿಟ್ಟಿತು ಎಂದು ಹೇಳುತ್ತೀರಿ. ಇದು ಆಗಲೇಬೇಕು ಏಕೆಂದರೆ ಸೇವೆ ಕೂಡ ಸಮಾಪ್ತಿ ಮಾಡಬೇಕಾ ಅಥವಾ ಹಾಗೆಯೇ ನಡೆಯುತ್ತಲೇ ಇರಬೇಕಾ? ಸಂಪನ್ನ ಮಾಡಿ ಸಮಾಪ್ತಿ ಮಾಡಬೇಕು. ಸಂಪನ್ನ ಕೂಡ ಕಡಿಮೆಯಲ್ಲಿ ಕಡಿಮೆ 9 ಲಕ್ಷಗಳ ಮಾಲೆಯನ್ನು ತಯಾರು ಮಾಡಿದಾಗ ಆಗುತ್ತದೆ. ಒಳ್ಳೆಯದು.

**ನಾಲ್ಕಾರು ಕಡೆಯ ಸರ್ವ ನಿಶ್ಚಯಬುದ್ಧಿ ಶ್ರೇಷ್ಠ ಆತ್ಮರಿಗೆ, ಸದಾ ನಿಶ್ಚಿತವಾದ ವಿಜಯಿ ಆತ್ಮರಿಗೆ, ಸದಾ ನಿಶ್ಚಿಂತ ಆತ್ಮರಿಗೆ, ಸದಾ ಶ್ರೇಷ್ಠ ವಿಧಿಯ ಮೂಲಕ ವೃದ್ಧಿ ಮಾಡುವುದಕ್ಕೆ ನಿಮಿತ್ತ ಮಾಡುವಂತಹ ವಿಶೇಷ ಆತ್ಮರಿಗೆ, ಸದಾ ಒಬ್ಬ ತಂದೆ, ಒಂದು ಬಲ, ಒಂದು ಭರವಸೆಯಲ್ಲಿ ಅಚಲ ಅಡೋಲವಾಗಿರುವಂತಹ ಸಮೀಪ ಆತ್ಮರಿಗೆ ಬಾಪ್‌ದಾದಾರವರ ನೆನಪು, ಪ್ರೀತಿ ಮತ್ತು ನಮಸ್ತೆ.**

ರಿವೈಸ್ ಕೋರ್ಸ್ 09-01-1995.

***ನಿಶ್ಚಯ ಬುದ್ಧಿಯ ಚಿಹ್ನೆ- ನಿಶ್ಚಿತ ವಿಜಯಿ ಹಾಗೂ ಸದಾ ನಿಶ್ಚಿಂತ ಸ್ಥಿತಿಯ ಅನುಭವ***

ಎಷ್ಟು ನಿಶ್ಚಯ ಬುದ್ಧಿಯ ಫೌಂಡೇಶನ್(ಬುನಾದಿ) ಪಕ್ಕಾ ಆಗಿರುತ್ತದೆಯೋ ಅಷ್ಟೇ ಆದಿಯಿಂದ ಅಂತತಿಮದವರೆಗೂ ಸಹಜ ಯೋಗಿ, ನಿರ್ಮಲ ಸ್ವಭಾವ, ಶುಭ ಭಾವನೆಯ ವೃತ್ತಿ ಹಾಗೂ ಆತ್ಮಿಕ ದೃಷ್ಟಿಯು ಸದಾ ನ್ಯಾಚುರಲ್ ರೂಪದಲ್ಲಿ ಪ್ರತಿ ಸಮಯ, ಚಲನೆ ಹಾಗೂ ಚಹರೆಯಿಂದ ಅದರ ಹೊಳಪು ಅನುಭವವಾಗುತ್ತದೆ. ಯಾವ ಸಮಯದಲ್ಲಿ ಹೆಚ್ಚು ಕಡಿಮೆಯಾಗುತ್ತದೆಯೋ ಆಗ ತಂದೆಯ ಮೇಲೆ, ಸ್ವಯಂನ ಮೇಲೆ, ಡ್ರಾಮಾದ ಮೇಲೆ ಹಾಗೂ ಬ್ರಾಹ್ಮಣ ಪರಿವಾರದ ಮೇಲಿನ ನಿಶ್ಚಯಗಳನ್ನು ಚೆಕ್ ಮಾಡಿಕೊಳ್ಳಿ. ತಂದೆಯ ಮೇಲಿನ ನಿಶ್ಚಯದಲ್ಲಿ ಎಲ್ಲರೂ ಪಾಸಾಗಿ ಬಿಟ್ಟಿದ್ದೀರಿ. ನಾನು ಇದಾಗಿದ್ದೇನೆ, ಹೇಗಿದ್ದೇನೆ ಎಂದು ತಿಳಿದುಕೊಂಡು ಒಪ್ಪಿಕೊಂಡು ಅದನ್ನು ಸ್ವರೂಪದಲ್ಲಿ, ಚಲನೆಯಲ್ಲಿ, ಕರ್ಮದಲ್ಲಿ ತರುವುದೇ ಸ್ವಯಂನ ಮೇಲಿನ ನಿಶ್ಚಯವಾಗಿದೆ. ಕೆಲ ಮಕ್ಕಳು ಬ್ರಾಹ್ಮಣ ಪರಿವಾರದೊಂದಿಗೆ ಕಿರಿಕಿರಿ ಇದೆ ಆದ್ದರಿಂದ ಪರಿವಾರವನ್ನು ಬಿಟ್ಟುಬಿಡುತ್ತೇವೆ ಎಂದಾಗ ಪರಿವಾರದ ಮೇಲಿನ ನಿಶ್ಚಯ ಸಡಿಲವಾಯಿತಲ್ಲವೇ? ಪರಿವಾರವೆಲ್ಲದೇ

ಮಾಲೆಯಲ್ಲಿ ಹೇಗೆ ಬರುತ್ತೀರಿ. ತಂದೆಯ ವಿಶೇಷತೆಯಾಗಿದೆ ಧರ್ಮ ಮತ್ತು ರಾಜ್ಯ ಎರಡರ ಸ್ಥಾಪನೆ ಮಾಡುವುದು. ಒಬ್ಬನೇ ರಾಜನಿದ್ದಾಗ ಏನು ಮಾಡುವನು ಬಲೆ ಎಷ್ಟು ಒಳ್ಳೆಯ ಸಿಂಹಾಸನ ಕಿರೀಟವಿದ್ದರೂ ಏನು ಪ್ರಯೋಜನ? ರಾಜಧಾನಿ ಅರ್ಥಾತ್ ಬ್ರಾಹ್ಮಣ ಪರಿವಾರವೇ ರಾಜ ಪರಿವಾರ. ಎಂತಹ ಪರಿಸ್ಥಿತಿ ದೃಶ್ಯವೇ ಎದುರಿಗೆ ಬಂದಾಗಲೂ ಡ್ರಾಮಾ ಡ್ರಾಮಾ ಎಂದು ನಿಶ್ಚಯ ಬುದ್ಧಿಯಿಂದ ಇರಬೇಕು ವ್ಯರ್ಥದಿಂದ ನಿಶ್ಚಿಂತ ಚಕ್ರವರ್ತಿಯರಾಗಬೇಕು. ಮರ್ಯಾದೆಗಳಲ್ಲಿ ನಿಶ್ಚಿಂತ ಚಕ್ರವರ್ತಿಯಲ್ಲ. ಎಲ್ಲರಿಗೂ ತಂದೆ ಬ್ರಹ್ಮರವರಾಗಿದ್ದಾರೆ ಆದ್ದರಿಂದ ತಂದೆಯನ್ನು ಅನುಸರಿಸಬೇಕು. ಅಕ್ಕನವರು ಅಥವಾ ಅಣ್ಣನವರನ್ನು ಅನುಸರಿಸಿರಿ ಎಂದು ನಿಮಗೆ ಹೇಳಿದ್ದಾರೆಯೇ? ಎಲ್ಲರ ವಿಶೇಷತೆಗಳನ್ನು ಬಲೆ ನೋಡಿದರೂ ಅನುಸರಿಸುವುದರಲ್ಲಿ ತಂದೆಯನ್ನೇ ಅನುಸರಿಸಬೇಕು. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ನಿಶ್ಚಯವೆಂಬ ಬುನಾದಿಯನ್ನು ಗಟ್ಟಿಯಾಗಿಸಿಕೊಂಡು ಆದಿಯಿಂದ ಅಂತಿಮದವರೆಗೆ ಸಹಜ ಯೋಗಿ, ನಿರ್ಮಲ ಸ್ವಭಾವ, ಶುಭ ಭಾವನೆಯ ವೃತ್ತಿ ಮತ್ತು ಆತ್ಮಿಕ ದೃಷ್ಟಿಯನ್ನು ಸದಾ ಮತ್ತು ಸ್ವತಹವಾಗಿ ಅನುಭವ ಮಾಡಿಕೊಂಡಿದ್ದೇನೆ.

2. ನಾನು ತಂದೆಯ ಮೇಲೆ, ಸ್ವಯಂನ ಮೇಲೆ, ಡ್ರಾಮಾದ ಮೇಲೆ ಮತ್ತು ಬ್ರಾಹ್ಮಣ ಪರಿವಾರವೆಂಬ ನಾಲ್ಕರ ಮೇಲೂ ನಿಶ್ಚಯವನ್ನು ಇಟ್ಟು ತಿಳಿದುಕೊಂಡು, ಅಂಗೀಕರಿಸಿ, ನಡೆಯುವ ನಿಶ್ಚಯ ಬುದ್ಧಿ ವಿಜಯಂತಿ ಸ್ವರೂಪ.

3. ನಾನು ವಿಜಯದಲ್ಲಿ ಏರುಪೇರಾದಾಗ ನಾಲ್ಕು ನಿಶ್ಚಯಗಳಲ್ಲಿ ಯಾವ ಕಡೆ ಏರುಪೇರು ಇದೆ ಎಂದು ಪರಿಶೀಲಿಸಿಕೊಂಡು ಸರಿಪಡಿಸಿಕೊಂಡಿದ್ದೇನೆ.

4. ನಾನು ಎಂತಹ ಪರಿಸ್ಥಿತಿ ಬಂದರೂ ವಿಜಯವನ್ನು ಪಡೆದು, ಯಾರು ಅಲುಗಾಡಿಸಲು ಪ್ರಯತ್ನಿಸಿದರೂ ನಿಶ್ಚಯದಿಂದ ಇರುವ ಮಾಸ್ಟರ್ ಸರ್ವ ಶಕ್ತಿವಾನ್ ಸ್ವರೂಪ ಮತ್ತು ವಿಶ್ವಕಲ್ಯಾಣಕಾರಿ.

5. ನಾನು ಪರಿವಾರದ ಜೊತೆ ನಡೆಯುತ್ತಾ ಮಾಲೆಯಲ್ಲಿ ಮಣಿಯಾಗಿ ನಂಬರನ್ನು ಪಡೆದಿದ್ದೇನೆ.

6. ನಾನು ಎಂತಹ ದೃಶ್ಯ ಎದುರಿಗೆ ಬಂದರೂ ಸಂಕಲ್ಪ, ಮಾತು ಮತ್ತು ಕರ್ಮದಲ್ಲಿ ನಿಶ್ಚಯ ಬುದ್ಧಿಯಿಂದ ಇರುತ್ತಾ ಡ್ರಾಮದ ಮೇಲೆ ನಿಶ್ಚಯದಿಂದ ಇರುವ ವಿಜಯೀ ಸ್ವರೂಪ.

7. ನಾನು ಡ್ರಾಮಾದ ಮೇಲೆ ಅಚಲ ನಿಶ್ಚಯದಿಂದ ಜ್ಞಾನಸ್ವರೂಪವಾಗಿ ಶಕ್ತಿಶಾಲಿಯಾಗಿ ಇರುವ ಸಮರ್ಥ ಸ್ವರೂಪ.

8. ನಾನು ನಿಶ್ಚಯದ ಬಲಹೀನತೆಯನ್ನು ಪರಿಶೀಲಿಸಿಕೊಳ್ಳುವುದರೊಂದಿಗೆ ಕ್ಷಣದಲ್ಲಿ ಪರಿವರ್ತನೆ ಮಾಡಿಕೊಂಡಿದ್ದೇನೆ.

9. ನಾನು ಸಾಗರನ ಸಮಾನವಾಗಿ ಮನಸ್ಪೂರ್ವಕ ಸ್ನೇಹ ಮತ್ತು ಗೌರವವನ್ನು ಕೊಡುವ ಮಧುಬನ ನಿವಾಸಿಯಾಗಿದ್ದೇನೆ.

10. ನಾನು ವ್ಯರ್ಥದಲ್ಲಿ ಸದಾ ನಿಶ್ಚಿಂತ ಚಕ್ರವರ್ತಿಯಾಗಿದ್ದೇನೆ.

11. ನಾನು ಬ್ರಹ್ಮ ತಂದೆಯನ್ನು ಅನುಸರಿಸುತ್ತಾ ಮರ್ಯಾದೆಗಳ ಹೆಜ್ಜೆಯ ಮೇಲೆ ಹೆಜ್ಜೆಯನ್ನು ಇಟ್ಟು ಗುರಿಯನ್ನು ತಲುಪಿದ್ದೇನೆ.

12. ನಾನು ಎಲ್ಲರೂ ಹೋಗೋಣ ನಡೆಯಿರಿ ಎಂದು ಬ್ರಹ್ಮಾ ತಂದೆ ಕರೆದ ತಕ್ಷಣವೇ ಜೊತೆಗೆ ಹೋಗಿದ್ದೇನೆ.

13. ನಾನು ದೇಹಭ್ರಾಂತಿ, ದೇಹಾಭಿಮಾನದ ಸೂಕ್ಷ್ಮ ಬಂಗಾರ ಮತ್ತು ಬೆಳ್ಳಿಯ ದಾರಗಳನ್ನು(ಬಂಧನಗಳು) ಸೂಕ್ಷ್ಮ ಬುದ್ಧಿಯಿಂದ, ಆಳವಾದ ಬುದ್ಧಿಯಿಂದ ಪರಿಶೀಲಿಸಿಕೊಂಡು ಸಮಾಪ್ತಿ ಮಾಡಿಕೊಂಡಿದ್ದೇನೆ.

14. ನಾನು ಸರ್ವರ ಪ್ರತಿ ಗುಣಗ್ರಹಕನಾಗಿ ಗೌರವವನ್ನು ಇಟ್ಟು ಸದಾ ಬ್ರಹ್ಮಾ ತಂದೆಯನ್ನು ಅನುಸರಿಸುತ್ತಿದ್ದೇನೆ .(ಅಣ್ಣಂದಿರು, ಅಕ್ಕಂದಿರನ್ನು ಅನುಸರಿಸುವುದಲ್ಲ)

15. ಎಂತಹ ಸಮಯದಲ್ಲಾದರೂ ಸಾಧನಗಳಿರದಿದ್ದರೂ ನನ್ನ ಸಾಧನೆಯಲ್ಲಿ ನಾನು ನಿರ್ವಿಘ್ನ ಸ್ವರೂಪ.